

## ಅಲ್ಲಿಯೂ ಇದೆ ನಮ್ಮನೆ...

ಕಳೆದ ಹಲವು ವರ್ಷಗಳಿಂದ 'ಸುಧಾ'ದಂಥ ಪತ್ರಿಕೆಯ ಅಭಿಮಾನಿಯಾಗಿದ್ದೇನೆ ಎಂಬುದು ನನಗೆ ಹೆಮ್ಮೆಯ ವಿಷಯ. ಈ ಹೆಮ್ಮೆಗೆ, ಆ ಪತ್ರಿಕೆಯಲ್ಲಿ ಪ್ರಕಟವಾಗುವ ವೈವಿಧ್ಯ, ಸೃಜನಾತ್ಮಕ ಬರಹಗಳೇ ಕಾರಣ. ಈ ವಾರ (ಮಾ. 18ರ ಸಂಚಿಕೆ) ಸುಧೀಂದ್ರ ಹಾಲ್ದೊಡ್ಡೇರಿ ಅವರು ಬರೆದಿರುವ 'ಅಲ್ಲಿಯೂ ಇದೆ ನಮ್ಮನೆ, ಹೋಗಲಾಗದು ಸುಮ್ಮನೆ' ಎಂಬ ವೈಜ್ಞಾನಿಕ ಲೇಖನ ಓದಿ ರೋಮಾಂಚನವಾಯ್ತು. ಬಾಹ್ಯಾಕಾಶ, ಅನ್ಯಗ್ರಹದಲ್ಲಿ ಮನುಷ್ಯವಾಸದ ಸಾಧ್ಯತೆಗಳ ಬಗ್ಗೆ ಈ ಲೇಖನ ಸಾಕಷ್ಟು ಆಳವಾದ ಮಾಹಿತಿಯನ್ನು ಕೊಟ್ಟಿದೆ.

—ಭೋಜರಾಜ

## ಅರ್ಥಪೂರ್ಣ ಕಥೆ

ಮಾ. 18ರ ಸಂಚಿಕೆಯಲ್ಲಿ ಪ್ರಕಟವಾದ, ಯಂಡಮೂರಿ ವೀರೇಂದ್ರನಾಥ್ (ಅನುವಾದ: ಯತಿರಾಜ್ ವೀರಾಂಬುಧಿ) ಅವರ ಕಥೆ 'ಬೆಟ್ಟದ ಮೇಲಿನ ನಕ್ಷತ್ರಗಳು' ಚೆನ್ನಾಗಿತ್ತು. ಗಂಡ, ಹೆಂಡತಿ, ಮಗಳು ಮತ್ತು ಮಗ ಇವರ ಕೌಟುಂಬಿಕ ಕಲಹವೂ ಅಲ್ಲದ, ತೀರಾ ವ್ಯಂಗ್ಯವೂ ಅಲ್ಲದ ಜುಗಲಬಂದಿಯ ಸ್ವಾರಸ್ಯಕರ ಘಟನೆಗಳ ಜೊತೆ ಸಾಗುವ ಕಥೆ, ಮಹಾಭಾರತ ಮತ್ತು ರಾಮಾಯಣ ಎರಡನ್ನೂ ಮೇಳೈಸಿಕೊಂಡು ಜೀವನ ದರ್ಶನ ಮಾಡಿಸುವಂತಿದೆ.

—ಮಲ್ಲಿಕಾರ್ಜುನ, ಸುರಧೇನುಪುರ

ಈ ಕಥೆ, ಎಲ್ಲರ ಮನದಲ್ಲೂ ಸದಾ ಮಿನುಗಬೇಕಾಗಿದೆ. ಯಂಡಮೂರಿ ವೀರೇಂದ್ರನಾಥರ ಬರಹ ಶೈಲಿಯನ್ನು ಅತ್ಯಂತ ಸಮರ್ಥವಾಗಿ ಭಾಷಾಂತರಿಸಲಾಗಿದೆ.

—ಮಣಿಪ್ರಕಾಶ್

ಮತ್ತೆ ಮತ್ತೆ ಓದಬೇಕೆನ್ನಿಸುವ ಕಥೆ. ಮುರಾರಿಯ ಮಾತುಗಳು 'ಹೌದಲ್ಲವೇ?' ಎಂದು ತರ್ಕಕ್ಕೆ ಹಚ್ಚಿದ್ದಂತೂ ಪರಮ ಸತ್ಯ.

—ಕೆ.ವಿ. ರಾಜಲಕ್ಷ್ಮಿ, ಬೆಂಗಳೂರು

## ಆಹಾರ vs ಆರೋಗ್ಯ

ಮಾ. 18ರ ಸಂಚಿಕೆಯಲ್ಲಿ ಡಾ. ವಿನಯ ಶ್ರೀನಿವಾಸ ಬರೆದ 'ನಮ್ಮ ಆರೋಗ್ಯ ಆಹಾರದಲ್ಲೇ ಇದೆ' ಲೇಖನದ ಎಂಬ ವಾದ ಸರಿಯಾದರೆ, ನಮ್ಮ ಅನಾರೋಗ್ಯವೂ ಆಹಾರದಲ್ಲೇ ಇದೆ ಎಂದರೂ ತಪ್ಪಲ್ಲ. ಯಾವ ಆಹಾರ, ಎಷ್ಟು ಮತ್ತು ಯಾವಾಗ ಸೇವಿಸಬೇಕು ಎಂದು ಯೋಚಿಸದೆ, ಹಸಿವಿಲ್ಲದಿದ್ದರೂ ತಿನ್ನುವ ಹಂಬಲ ಮನುಷ್ಯನಿಗೆ ಹೆಚ್ಚಾಗಿದ್ದರಿಂದಲೇ ಮನುಷ್ಯನಿಗಿರುವಷ್ಟು ಕಾಯಿಲೆಗಳು ಮತ್ತು ಆಸ್ಪತ್ರೆಗಳು ಪ್ರಾಣಿಗಳಿಗೆ ಇಲ್ಲದಿರಬಹುದು.

—ಎಡ್ವರ್ಡ್ ರೊಡ್ರಿಗಸ್ ಎಸ್. ಜೆ., ಬೆಂಗಳೂರು

ಲೇಖಕರು ಆಹಾರವನ್ನು ಹೇಗೆ, ಎಷ್ಟು, ಯಾವ ರೀತಿಯಲ್ಲಿ ಸ್ವೀಕರಿಸಬೇಕು ಎಂಬುದರ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಇದು ರೋಗಗಳನ್ನು ದೂರವಿಡುವುದರಲ್ಲಿ ಸಹಕಾರಿಯಾಗಿದೆ. ಅಷ್ಟಲ್ಲದೆ ಬಲ್ಲವರು ಹೇಳುತ್ತಾರೆಯೇ, 'ಊಟ ಬಲ್ಲವನಿಗೆ ರೋಗವಿಲ್ಲ' ಎಂದು.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ

ಋತುಮಾನಕ್ಕೆ ತಕ್ಕಂತೆ ಆಹಾರ ಸೇವನೆ ಆರೋಗ್ಯಕ್ಕೆ ಒಳ್ಳೆಯದು. ಆಹಾರ ಕಡೆಗಣಿಸಿ ಔಷಧದ ಕಡೆ ಗಮನಹರಿಸಿರುವುದು ಇಂದಿನ ವಿಪರ್ಯಾಸ.

—ರಾಜಶೇಖರ ಗೌಡ, ಕೊಟ್ಟೂರು

## ಸಂವೇದನಾಹೀನ ಹಾಸ್ಯ

ಮಾ. 18 ರ ಸಂಚಿಕೆಯ 'ನಕ್ಕುಬಿಡಿ'ಯಲ್ಲಿ ಕೆ. ಆದಿತ್ಯ ಹೆಬ್ಬಾರ್ ಅವರು ಸಂಗ್ರಹಿಸಿದ, ವಿಕಲಾಂಗ ಮಗುವಿನ ಜನನದ ಕುರಿತ ಜೋಕು **most insensitive.** ಇಂಥದು ಬೇಡ.

—ಪದ್ಮರಾಜ ದಂಡಾವತಿ, ಬೆಂಗಳೂರು

## ಲಜ್ಜೆ ಬೇಡವೇ?

ರಘುನಾಥ ಚ.ಹ. ಅವರು ಮಾ. 18ರ ಸಂಚಿಕೆಯ 'ನಿಮ್ಮೊಡನೆ' ಪುಟದಲ್ಲಿ ಬರೆದ 'ಸಾರ್ವಜನಿಕ ಜೀವನದಲ್ಲಿ ಲಜ್ಜೆ ಬೇಡವೆ?' ಲೇಖನ ಓದಿದೆ. ಹಗರಣದ ಆರೋಪ ನಿಜವಿರಲಿ, ಇಲ್ಲದೇ ಇರಲಿ, ಸಮೂಹ ಮಾಧ್ಯಮಗಳು ತಮ್ಮ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ಲಕ್ಷಿಸಿ ಹಗರಣವನ್ನೇ ವೈಭವೀಕರಿಸುವದು ಎಷ್ಟು ಸರಿ? 'ಕೇವಲ ಅಧಿಕಾರ ಲಾಲಸೆಗಾಗಿ ಪಕ್ಷಾಂತರ ಮಾಡುವದು ಕೂಡಾ ಹಾದರವೆ' ಎನ್ನುವ ಲೇಖಕರ ಅಭಿಪ್ರಾಯಕ್ಕೆ ನನ್ನ ಸಹಮತವಿದೆ. ಲೇಖಕರ ಚಾಟಿಯೇಟಿನಿಂದಲಾದರೂ ಈ ಹಗರಣದ ರಾಜಕಾರಣಿಗಳು ಎಚ್ಚೆತ್ತುಕೊಳ್ಳಬಹುದೇ?

—ವೀರಭದ್ರ ರಟ್ಟಿಹಳ್ಳಿ, ಹುಬ್ಬಳ್ಳಿ

## ಕೌಶಲಕ್ಕೆ ಖುಷಿ

'ಕೌಶಲ ಕಲಿಕೆ ಜೊತೆ ಖುಷಿ ಉಚಿತ' ಎಂಬ ಶೀರ್ಷಿಕೆಯಲ್ಲಿ ಸ್ವಯಂಪ್ರಭಾ ಲೇಖನ (ಮಾ. 18) ಮಾರ್ಮಿಕವಾಗಿದೆ. ಹಿಂದೆ ಮಕ್ಕಳಿಗೆ, ಅದರಲ್ಲೂ ಹೆಣ್ಣುಮಕ್ಕಳಿಗೆ ಅಡುಗೆ ಮಾಡುವುದರ ಬಗ್ಗೆ ಹಿರಿಯರು ತಿಳಿಹೇಳುತಿದ್ದರು. ಮಗಳು ಮಾಡಿದ ಪ್ಲಾಸ್ಟಿಕ್ ಹೆಣಿಗೆ ಬುಟ್ಟಿ, ಲೇಸಿನ ಕೆಲಸ, ಗಾಜಿನ ಗುಂಡು /ಕೊಳವೆಯ ಬಾಗಿಲ ತೋರಣಗಳನ್ನು ಮನೆಗೆ ಬಂದವರಿಗೆ ತೋರಿಸಿ ಖುಷಿಪಡುತ್ತಿದ್ದರು. ಆಗ ಹೆಣ್ಣು ನೋಡಲು ಬಂದವರು ಸಹ ಹುಡುಗಿ ಕಲಿತಿರುವ ಅಡುಗೆ, ತಿಂಡಿ, ಕೌಶಲ ಕೆಲಸದ ಬಗ್ಗೆ ಕೇಳುತ್ತಿದ್ದರೇ ವಿನಃ ಈಗಿನಂತೆ ಹುಡುಗಿ ಏನು ಓದಿದ್ದಾಳೆ? ಎಷ್ಟು ಪಗಾರ ಬರುತ್ತೆ? ಯಾವ ಕಂಪನಿಯಲ್ಲಿ ಕೆಲಸ ಎಂದು ಕೇಳುತ್ತಿರಲಿಲ್ಲ.

—ಬಾಣಾವರ ನಾಗರಾಜ, ಬೆಂಗಳೂರು

## ವಿನಯ್ ಕುಮಾರ್ ಸಂದರ್ಶನ

ವಿನಯ್ ಕುಮಾರ್ ಕುರಿತು ಪ್ರಮೋದ್ ಮಾಡಿರುವ ಸಂದರ್ಶನ (ಮಾ. 18) ಅತ್ಯುತ್ತಮ ಅಂಶಗಳಿಂದ ಕೂಡಿದೆ. ನಿವೃತ್ತಿ ಪಡೆದ ಆಟಗಾರರ ಬಗ್ಗೆ ಬರೆದಾಗ ಅವರ ಸಾಧನೆಯ ಅಂಕಿ ಅಂಶಗಳನ್ನು ತಿಳಿಸಿದರೆ ಅದು ಸಂಗ್ರಹಯೋಗ್ಯ ಬರಹವಾಗುತ್ತದೆ. ವಿನಯ್ ಕುಮಾರ್ ಕರ್ನಾಟಕ ಕ್ರಿಕೆಟ್ ಕಂಡ ಅದ್ವಿತೀಯ ಆಲ್ ರೌಂಡರ್ ಮತ್ತು ಯಶಸ್ವಿ ಕ್ಯಾಪ್ಟನ್. ಆದರೆ ದೇಶೀಯ ಕ್ರಿಕೆಟ್‌ನಲ್ಲಿ ಮಿಂಚಿದಷ್ಟು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಮಿಂಚದೇ ಹೋದ ಹಲವರಲ್ಲಿ ವಿನಯ್ ಕೂಡ ಒಬ್ಬರು. 2013/14 ಮತ್ತು 2014/15ರಲ್ಲಿ ಸತತವಾಗಿ ಕರ್ನಾಟಕ ತಂಡ ರಣಜಿ, ಇರಾನಿ ಮತ್ತು ವಿಜಯ್ ಹಜಾರೆ ಟ್ರೋಫಿ ಗೆದ್ದ ವಿಷಯ ಬಂದಾಗಲೆಲ್ಲ ವಿನಯ್ ಕುಮಾರ್ ಹೆಸರು ಮುಂಚೂಣಿಯಲ್ಲಿರುತ್ತದೆ.



'ಹೊಸಬರಿಗೆ ಅವಕಾಶ ಕೊಡಬೇಕು ಎನ್ನುವ ಕಾರಣಕ್ಕೆ ಕರ್ನಾಟಕ ತಂಡ ತೊರೆದು ಪುದುಚೇರಿಗೆ ಹೋದೆ' ಎಂದು ಹೇಳಿರುವುದು ಸಮಂಜಸವೆನಿಸುವುದಿಲ್ಲ. ಏಕೆಂದರೆ ಪುದುಚೇರಿಯಲ್ಲಿನ ಹೊಸಬರ ಅವಕಾಶ ಕಸಿದುಕೊಂಡಂತಾಗುವುದಿಲ್ಲವೇ?

—ಚನ್ನಗಿರಿ ಕೇಶವಮೂರ್ತಿ, ಬೆಂಗಳೂರು

ಸಂದರ್ಶನ ಸಕಾಲಿಕವಾಗಿತ್ತಾದರೂ, ಸಾಧನೆಯ ವಿವರಗಳು ಬೇಕೆನ್ನಿಸಿತು. 2014/15ನೇ ಸಾಲಿನ ರಣಜಿ ಟ್ರೋಫಿಯಲ್ಲಿ, ಮುಂಬೈ ವಿರುದ್ಧದ ಸೆಮಿಫೈನಲ್‌ನಲ್ಲಿ ವಿನಯ್ 20 ರನ್‌ಗಳಿಗೆ 6 ವಿಕೆಟ್ ಗಳಿಸಿದ್ದು ದಾಖಲೆಯೇ ಸರಿ! ಇದರ ಜೊತೆಗೆ ವಿನಯ್ ಇದೇ ಋತುವಿನಲ್ಲಿ ತಮಿಳುನಾಡು ತಂಡದ ವಿರುದ್ಧ ಫೈನಲ್ ಪಂದ್ಯದಲ್ಲಿ ಅಜೇಯ 105 ರನ್ ಗಳಿಸಿ ಕರ್ನಾಟಕ ತಂಡಕ್ಕೆ 'ಟ್ರೋಫಿ' ತಂದುಕೊಟ್ಟಿದ್ದು ಸಾಮಾನ್ಯವಲ್ಲ!

—ಜಿ. ರಾಜಣ್ಣ, ದಾವಣಗೆರೆ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ-ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ-ಮೇಲ್: feedback@sudha.co.in